

# ಶ್ರೀ ಸುಶೀಲೇಂದ್ರ ತೀರ್ಥರು

## ಹೊಸರಿತ್ತಿ

**ಸನ್ಯಾಸಾಶ್ರಮ ಕಾಲ – 1912-1926**

**ಸುಧಾದ್ಯಮಲಸದ್ಬೋಧಂ ಸುಕೀರ್ತಿವಿಲಸದ್ದಿಶಮ್ ।**
**ಸುಧೀಸಂಸ್ತುತ್ಯಸುಗುಣಂ ಸುಶೀಲೇಂದ್ರಗುರುಂ ಭಜೇ ।**

**ಆರಾಧನ – ಆಷಾಢ ಶುದ್ಧ ತೃತೀಯ**

**ಪೂರ್ವಾಶ್ರಮ ನಾಮ – ಕೃಷ್ಣಾಚಾರ್ಯ**

**ಆಶ್ರಮ ಸ್ವೀಕಾರ – 1912 ಪರೀಭಾವಿ ಸಂವತ್ಸರ,**
**ಆಶ್ವಯುಜ ವಿಜಯದಶಮಿ**

**ಆಶ್ರಮ ಗುರುಗಳು – ಶ್ರೀ ಸುಕೃತೀಂದ್ರತೀರ್ಥರು**
(ತಮ್ಮ ಪೂರ್ವಾಶ್ರಮ ಹಿರಿಯ ಸಹೋದರರು)
**ಆಶ್ರಮ ಶಿಷ್ಯರು – ಶ್ರೀ ಸುವ್ರತೀಂದ್ರ ತೀರ್ಥರು**
**ವೃಂದಾವನ – ಹೊಸರಿತ್ತಿ (ಸವಣೂರಿನಿಂದ ೨೦ ಕಿ.ಮೀ)**
**ಮೃತ್ತಿಕಾ ವೃಂದಾವನ – ಆಲಿಪುರ ಬೆಳ್ಳಾರಿ ಜಿಲ್ಲೆ**

**ವಿದ್ಯಾಗುರುಗಳು –**

೧. ಶ್ರೀಸುಪ್ರಜ್ಞೇಂದ್ರತೀರ್ಥರು – ಕಾವ್ಯ, ನಾಟಕ, ಅಲಂಕಾರ, ವೇದಾಂತಾದಿ ಶಾಸ್ತ್ರಗಳು
೨. ಶ್ರೀ ಹುಲಿ ಹನುಮಂತಾಚಾರ್ಯರು– ನ್ಯಾಯ, ಮೀಮಾಂಸಾ
೩. ಶ್ರೀ ಸುಕೃತೀಂದ್ರತೀರ್ಥರು (ತಮ್ಮ ಹಿರಿಯ ಅಣ್ಣ ಶ್ರೀ ವೇಣು ಗೋಪಾಲಾಚಾರ್ಯರು) – ಸಮಗ್ರ ದ್ವೈತ ವೇದಾಂತಾಧ್ಯಯನ.

"ಶ್ರೀಮತ್ಸಮೀರಸಮಯ ಸಂವರ್ಧಿನೀ ಸಭಾ" – ತಾವು ತಮ್ಮ ಪೂರ್ವಾಶ್ರಮದಿಂದಲೇ ಶ್ರೀ ಸುಕೃತೀಂದ್ರತೀರ್ಥರ ಅಣತಿಯಂತೆ ವಿದ್ಯಾಪ್ರಸಾರ, ವಿದ್ವಜ್ಜನರ ಸಹವಾಸ ಹಾಗೂ ಪಂಡಿತ ಪೋಷಣೆಯಲ್ಲಿ ಬಹಳ ಆದರ. ದೇಶಾದ್ಯಂತ ಚತು:ಶಾಸ್ತ್ರ ಕೋವಿದರಾದ ತ್ರಿಮಸ್ಥ ಪಂಡಿತರನ್ನೂ, ವಿದ್ಯಾರ್ಥಿಗಳನ್ನೂ ಆಹ್ವಾನಿಸಿ ಬಹಳ ವೈಭವದಿಂದ ವಿದ್ವತ್ಸಭೆಗಳನ್ನು ನಡೆಸಿ ಷಡ್ದರ್ಶನಗಳಲ್ಲಿ ಮತ್ತು ಚತು:ಶಾಸ್ತ್ರಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕರಾಗಿ ಪರೀಕ್ಷೆಗಳನ್ನು ನಡೆಸಿ ವಿಶೇಷ ಸಂಭಾವನಾದಿಗಳನ್ನಿತ್ತು ಸಂತೋಷಿಸುತ್ತಿದ್ದರಲ್ಲದೆ, ಪಂಡಿತರಿಗೆ, ಧನ, ಕನಕ, ರಜತ ಪಾತ್ರೆ, ಶಾಲು ಕೊಟ್ಟು ಸನ್ಮಾನಿಸುತ್ತಿದ್ದರು. ಒಂದು ಸಲವಂತೂ ಎರಡು ಕಡೆ ವಿದ್ವತ್ಸಭೆಗಳನ್ನು ಏಕಕಾಲದಲ್ಲಿ ನೆರವೇರಿಸಿದರು.

**"ಅಭಿನವ ರಾಘವೇಂದ್ರ"** – ನಂಜನಗೂಡಿನ ಶ್ರೀ ಸಿ. ನಂಜುಂಡಯ್ಯ ಎಂಬ ಕವಿಯು ಅಭಿನವ ರಾಘವೇಂದ್ರಚರಿತೆ ಎಂಬ ಹೆಸರಿನಿಂದ ಕನ್ನಡ ಕಾವ್ಯವನ್ನು ರಚಿಸಿ ಶ್ರೀಗಳವರಲ್ಲಿ ಸಮರ್ಪಿಸಿದಾಗ "ಅಭಿನವರಾಘವೇಂದ್ರ"ರು ಎಂದು ಬರೆದುದನ್ನು ಆಕ್ಷೇಪಿಸಿ ತಮ್ಮ ಚರಿತ್ರೆ ಸತ್ಯವಿದ್ದರೂ ಆ ಗ್ರಂಥವನ್ನು ನದಿಗೆ ಹಾಕಿಸಿದರು. ಮುಂದೆ ಶ್ರೀಗಳವರು ವೃಂದಾವನಸ್ಥರಾದ ಮೇಲೆ ಶ್ರೀ ಎಲ್ಲತ್ತೂರು ಕೃಷ್ಣಾಚಾರ್ಯರ ಸಲಹೆಯಂತೆ ಆ ಕವಿಗಳು ಅದನ್ನು ಮುದ್ರಿಸಿದರು.

**ಚಂದ್ರಿಕಾಪ್ರಕಾಶಪ್ರಸರ** – ಇವರ ಕಾಲದಲ್ಲಿ ಮಹಾಮಹೋಪಾಧ್ಯಾಯ ಶ್ರೀ ಅನಂತಕೃಷ್ಣಸ್ವಾಮಿಗಳು ರಚಿಸಿದ **"ಚಂದ್ರಿಕಾ ಖಂಡನ"** ಗ್ರಂಥಕ್ಕೆ ಪ್ರತಿಯಾಗಿ ಶ್ರೀ ಗೌಡಗಿರಿ ವೆಂಕಟರಮಣಾಚಾರ್ಯರಿಂದ **"ಚಂದ್ರಿಕಾಪ್ರಕಾಶಪ್ರಸರ"** ಎಂಬ ಗ್ರಂಥವನ್ನು ಬರೆಸಿ, ತಾವು ಅದನ್ನು ಅಮೂಲಾಗ್ರವಾಗಿ ವಿಮರ್ಶಿಸಿ, ಮಠದ ಖರ್ಚಿನಿಂದಲೇ ಮುದ್ರಿಸಿ, ಪ್ರಕಟಿಸಲು ಅನುಕೂಲ ಮಾಡಿಕೊಟ್ಟು, ಶ್ರೀ ವ್ಯಾಸರಾಜರ ಅನುಗ್ರಹಕ್ಕೆ ಪಾತ್ರರಾದರು. ಇದು ಇವರ ಕಾಲದಲ್ಲಿ ನಡೆದ ಒಂದು ಮಹತ್ಕಾರ್ಯವೆಂದು ಹೇಳಬಹುದು.

**ಶಿಷ್ಯಸಂಪತ್ತು** – ಶ್ರೀ ಸುಶೀಲೇಂದ್ರ ತೀರ್ಥರು ಮಂತ್ರಾಲಯ, ನಂಜನಗೂಡು ಮುಂತಾದ ಸ್ಥಳಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿ, ಶ್ರೀ ಮಧ್ವಸಿದ್ಧಾಂತ ಗ್ರಂಥಗಳ ಪಾಠಪ್ರವಚನಾದಿಗಳೂ, ಸಚ್ಛಾಸ್ತ್ರ ವ್ಯಾಸಂಗವೂ, ನಿರಾತಂಕವಾಗಿ ನಡೆಯಲು ಅವಕಾಶ ಮಾಡಿದರು. ಶ್ರೀಗಳವರಲ್ಲಿ ವ್ಯಾಸಂಗ ಮಾಡಿದವರುಗಳೆಂದರೆ ಶ್ರೀ ಗುನ್ನಾಳ ರಾಘವೇಂದ್ರಾಚಾರ್ಯರು, ಶ್ರೀ ಅರಣಿ

ವೇದವ್ಯಾಸಾಚಾರ್ಯರು, ಶ್ರೀಕುಂಜಂಬೇಡು ವೆಂಕಟರಮಣಾಚಾರ್ಯರು, ಶ್ರೀ ದುರ್ಗಂ ಭೀಮಾಚಾರ್ಯರು, ಶ್ರೀ ಅರ್ಚಕ ವೇದವ್ಯಾಸಾಚಾರ್ಯರು, ಶ್ರೀ ಪುರಾಣಿಕ ರಾಘವೇಂದ್ರಾಚಾರ್ಯರು, ಶ್ರೀ ಧಡೇಸೂಗೂರು ವೆಂಕೋಬಾಚಾರ್ಯರು, ಶ್ರೀಪತ್ಯಾಚಾರ್ಯರು, ಅಂಬಳೆ ಶ್ರೀನಿವಾಸಾಚಾರ್ಯರು ಮುಂತಾದವರು.

**ಸಂಗ್ರಹಲೇಖನ – ನರಹರಿಸುಮಧ್ವ**

www.sumadhwaseva.com